ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.

**2014-15 ಎಂ.ಫಿಲ್ ಪದವಿ ಪದವಿ ಪಡೆದ ಮಹಾಪ್ರಬಂಧದ ಮುದ್ರಣಕ್ಕೆ ಧನಸಹಾಯ ಅರ್ಜಿ**
**(ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ)**

1. ಹೆಸರು ಮತ್ತು ವಿಳಾಸ :
2. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ (ಲಿಖಿತವಾಗಿ ನಮೂದಿಸುವುದು) :
3. ಜಾತಿ ಪ್ರಮಾಣ ಪತ್ರ (ದೃಢೀಕರಣ ಪ್ರತಿ) :
4. ಪ್ರಬಂಧದ ಶೀರ್ಷಿಕೆ ಮತ್ತು ಪುಟಸಂಖ್ಯೆ :
5. ಎಂ.ಫಿಲ್ ಪದವಿ ಪಡೆದ ವರ್ಷ (ಪದವಿ ಪ್ರಮಾಣಪತ್ರ ಲಗತ್ತಿಸಬೇಕು) :
6. ಎಂ.ಫಿಲ್ ಪದವಿ ಪ್ರದಾನ ಮಾಡಿದ ವಿಶ್ವವಿದ್ಯಾಲಯದ ಹೆಸರು ಮತ್ತು ವಿಳಾಸ :
7. ಈ ಹಿಂದೆ ಈ ಪ್ರಬಂಧಕ್ಕೆ ಯಾವುದೇ ಮೂಲದಿಂದ ಧನಸಹಾಯ ಪಡೆದಿಲ್ಲ ಹಾಗೂ ಮುದ್ರಣವಾಗಿರುವುದಿಲ್ಲವೆಂಬ ಬಗ್ಗೆ ರೂ. 50.00 ಮುಖ ಬೆಲೆಯ ಛಾಪಾ ಕಾಗದದ ಅಫಿಡವಿಟ್ (ನೋಟರಿಯಿಂದ ಸಹಿ ಮಾಡಿದ ಮೂಲ ಅಫಿಡವಿಟ್ ಲಗತ್ತಿಸಬೇಕು) :
8. ಎಂ.ಫಿಲ್ ಮಾರ್ಗದರ್ಶಕರ ಹೆಸರು ಮತ್ತು ವಿಳಾಸ :
9. ಪ್ರಬಂಧವನ್ನು ಮುದ್ರಿಸಲು ಯೋಗ್ಯ ಎಂಬುದಕ್ಕೆ ಮಾರ್ಗದರ್ಶಕರಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸಬೇಕು. :
10. ಮುದ್ರಣಕ್ಕೆ ತಗಲುವ ಅಂದಾಜು ವೆಚ್ಚದ ದರಪಟ್ಟಿಯನ್ನು ಮುದ್ರಣಾಲಯದಿಂದ ಪಡೆದು ಲಗತ್ತಿಸಬೇಕು. :

ಮೇಲೆ ಒದಗಿಸಿರುವ ಎಲ್ಲಾ ಮಾಹಿತಿಗಳು ಸತ್ಯವೆಂದು ಮತ್ತು ಈ ಯೋಜನೆಯಡಿ ವಿಧಿಸಿರುವ ಎಲ್ಲಾ ನಿಯಮ ಹಾಗೂ ನಿಬಂಧನೆಗಳಿಗೆ ಬದ್ಧನಾಗಿರುವೆನೆಂದು ಈ ಮೂಲಕ ಪ್ರಮಾಣೀಕರಿಸಿರುತ್ತೇನೆ.

ದಿನಾಂಕ: ಸಹಿ :

ಸ್ಥಳ: ಹೆಸರು :

ವಿಳಾಸ,
ದೂರವಾಣಿ:

25/8/2015

## ಎಂ.ಫಿಲ್. ಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ - ಯೋಜನೆಯ ನಿಯಮ ಮತ್ತು ನಿಬಂಧನೆಗಳು

1. ಕಡ್ಡಾಯವಾಗಿ ಎಂ.ಫಿಲ್ ಪ್ರಬಂಧವು ಕನ್ನಡ ಮಾಧ್ಯಮದಲ್ಲಿರತಕ್ಕದ್ದು. ಇದು ಯಾವುದೇ ವಿಷಯಕ್ಕೆ ಸಂಬಂಧಿಸಿದ್ದಾಗಿರಬಹುದು. ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯಗಳಿಂದ ಕನ್ನಡ ಮಾಧ್ಯಮದಲ್ಲಿ, **2014-15ನೇ** ಸಾಲಿನಲ್ಲಿ ಪಿಎಚ್.ಡಿ ಪದವಿ ಪಡೆದ ಪ್ರಬಂಧಗಳನ್ನು ಮಾತ್ರ ಈ ಯೋಜನೆಯಡಿ ಪರಿಗಣಿಸಲಾಗುತ್ತದೆ.

2. ನಿಗದಿತ ಅರ್ಜಿ ನಮೂನೆಯೊಂದಿಗೆ ಎಂ.ಫಿಲ್ ಪಡೆದ ಪದವಿ ಪ್ರಮಾಣ ಪತ್ರ (ಕಾನ್ವೋಕೇಷನ್) ಮತ್ತು ಪ್ರಬಂಧದ 1000 ಪ್ರತಿಗಳ ಮುದ್ರಣಕ್ಕೆ ತಗಲುವ ಅಂದಾಜು ವೆಚ್ಚದ ದರಪಟ್ಟಿಯನ್ನು ಮುದ್ರಣಾಲಯದಿಂದ ಪಡೆದು ಅರ್ಜಿಯ ಜೊತೆ ಲಗತ್ತಿಸಬೇಕು.

3. ಹಸ್ತಪ್ರತಿಯ ಮುದ್ರಣಕ್ಕೆ ಧನಸಹಾಯ ನೀಡುವ ಯೋಜನೆ ಇದಾಗಿದ್ದು, ಎಂ.ಫಿಲ್ ಪದವಿ ಪಡೆದ ಈ ಪ್ರಬಂಧವು ಈ ಹಿಂದೆ ಮುದ್ರಣವಾಗಿರುವುದಿಲ್ಲ ಮತ್ತು ಯಾವುದೇ ಸಂಘ-ಸಂಸ್ಥೆಗಳಿಂದಾಗಲಿ ಅಥವಾ ಸರ್ಕಾರದ ಇತರೆ ಯಾವುದೇ ಇಲಾಖೆಗಳಿಂದಾಗಲಿ ಈ ಹಸ್ತಪ್ರತಿಯ ಮುದ್ರಣಕ್ಕೆ ಧನಸಹಾಯ ಪಡೆದಿರುವುದಿಲ್ಲ ಎಂಬುದರ ಬಗ್ಗೆ ರೂ.50/-ರ ಮೌಲ್ಯದ ಛಾಪಾಕಾಗದದಲ್ಲಿ ನೋಟರಿ ಮಾಡಿಸಿದ ಅಫಿಡವಿಟ್ ಹಾಗೂ ಪ್ರಬಂಧವನ್ನು ಮುದ್ರಿಸಲು ಯೋಗ್ಯ ಎಂಬುದಕ್ಕೆ ಮಾರ್ಗದರ್ಶಕರಿಂದ ಪಡೆದ ಪ್ರಮಾಣ ಪತ್ರಗಳನ್ನು ಅರ್ಜಿಯ ಜೊತೆ ಲಗತ್ತಿಸಬೇಕು.

4. ಮುದ್ರಣಕ್ಕೆ ಎಷ್ಟೇ ವೆಚ್ಚವಾಗಲಿ ಇಲಾಖೆಯಿಂದ ಗರಿಷ್ಠ ರೂ.30,000/-(ರೂಪಾಯಿ ಮೂವತ್ತು ಸಾವಿರ ಮಾತ್ರ) ಗಳ ಧನಸಹಾಯ ಮಾತ್ರ ನೀಡಲಾಗುವುದು.

5. ಪ್ರಬಂಧದಲ್ಲಿ ಆರ್ಥಿಕ ನೆರವು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಎಂದು ಮುದ್ರಿಸಬೇಕು.

6. ಧನಸಹಾಯ ಪಡೆದ ಎರಡು ತಿಂಗಳೊಳಗೆ ಪ್ರಬಂಧವನ್ನು ಮುದ್ರಿಸಿ ಲೆಕ್ಕಪರಿಶೋಧಕರಿಂದ ದೃಢೀಕರಿಸಿದ ವೆಚ್ಚಪಟ್ಟಿ ಹಾಗೂ ಹಣಬಳಕೆ ಪ್ರಮಾಣ ಪತ್ರಗಳನ್ನು ದ್ವಿಪ್ರತಿಯಲ್ಲಿ ಮತ್ತು ಮುದ್ರಿತ ಪ್ರಬಂಧದ 05 ಪ್ರತಿಯನ್ನು ಇಲಾಖೆಗೆ ಉಚಿತವಾಗಿ ನೀಡಬೇಕು.

7. ಅರ್ಜಿಯನ್ನು ಇಲಾಖೆಯ ವೆಬ್ಸೈಟ್ **kannadasiri.co.in**ನಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ದಾಖಲೆಗಳ ಸಮೇತ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು-560002. ಇವರಿಗೆ **ದಿನಾಂಕ:25.09.2015**ರ ಒಳಗಾಗಿ ಕಳುಹಿಸಿಕೊಡಲು ಕೊನೆಯ ದಿನಾಂಕವಾಗಿರುತ್ತದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

8. ಎಂ.ಫಿಲ್ ಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅನುಸೂಚಿತ ಜಾತಿ/ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರಬೇಕು.

ಕರಡು ನಿರ್ದೇಶಕರಿಂದ ಅನುಮೋದನೆಗೊಂಡಿದೆ.

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.